ಏನಾದರೂ ಅನಿಸಲಿ, ಯಾರೇ ನಿಮ್ಮ ಫೋನಿಗೆ ಖರೆ ಮಾಡಿ ಏನೇ ಹೇಳಲಿ, ಸುಮ್ಮನೆ ಸಾಗುತ್ತಿರಿ, ವಿಚಲಿತರಾಗಬೇಡಿ'' ಎಂದು ಕೆಳಗೆ ಹೇಳಿದ ಮಾತು ನೆನಪಿಗೆ ಬಂದರೂ, ಆ ಹೆಂಗಸು, ಅವಳ ವಿಕಾರ ಕೂದಲು, ದೇಹ, ಕಿರುಚಿ ಹೇಳಿದ ಮಾತು ಮತ್ತೆ ಮತ್ತೆ ರಾಚಿದಂತಾಗಿ ಅವಳು ಹೇಳಿದನ್ನೇ ಮಾಡಿಬಿಡೋಣ! ಹಾಗೆಯೇ ಕೆಳಗೆ ಹೇಳಿದಂತೆ ಧೃತಿಗೆಡದೆ ಅಂತ್ಯವನ್ನೂ ಮುಟ್ಟೋಣ! ಎಂದು ನಿರ್ಧರಿಸಿದನು. ಅವನು ಹೆಜ್ಜೆ ಹೆಜ್ಜೆ ಹಾಕುತ್ತಾ ಸಾಗಿದಂತೆ ಅವನ ಇಡೀ ದೇಹವೇ ಅವನಾಗುತ್ತಿದ್ದದ್ದನ್ನು ಗಮನಿಸಿದ! ಅವನ ಕೈ, ಕಾಲು, ಕಣ್ಣು, ಮೂಗು, ಹೊಟ್ಟೆ, ರಟ್ಟೆ ಎಲ್ಲವೂ ಅವನೇ ಆಗುತ್ತಿದ್ದ! ಇಷ್ಟು ದಿನ ಅವನ ತಲೆಯಲ್ಲೋ, ಮೆದುಳಲ್ಲೋ, ಮನಸಲ್ಲೋ, ಎಲ್ಲೋ... ಅವನ ಆಲೋಚನೆ, ಅವನ ಆಗು ಹೋಗುಗಳ ವಿವೇಚನೆ ನಡೆಯುತ್ತಿತ್ತೊ, ಈಗ ಅವು ಅಲ್ಲಿ ನಡೆಯುತ್ತಿರಲಿಲ್ಲ! ಅವನ ದೇಹದ ಒಂದೊಂದು ಅಂಗಾಂಗಗಳಲ್ಲೂ ಈಗ ಅವೆಲ್ಲವೂ ನಡೆಯುತ್ತಿವೆ! ಎಲ್ಲವೂ ಅವನಾಗುತ್ತಿದ್ದಾನೆ, ಅವನು ಎಲ್ಲವೂ ಆಗುತ್ತಿದ್ದಾನೆ! ಹೆಜ್ಜೆ ಹೆಜ್ಜೆಗೂ ಏನೋ ಕರಗಿದಂತೆ ದೇಹದಲ್ಲೋ, ಮನಸಿನಲ್ಲೋ ಅವನಿಗೇ ತಿಳಿಯುತ್ತಿರಲಿಲ್ಲ. ಕರಗಿ ಕರಗಿ ಹಗುರಾಗುತ್ತಿದ್ದದನ್ನಷ್ಟೇ ಅನುಭವಿಸುತ್ತಿದ್ದ. ಕಲ್ಲು, ಮುಳ್ಳು, ಹೂ... ಯಾವೂದರ ಮೇಲೆ ಹೆಜ್ಜೆ ಇಟ್ಟರೂ ಎಲ್ಲವೂ ಒಂದೇ ಎನಿಸುತ್ತಿತ್ತು. ಹಾಗೆಯೇ ಹಗಲು ಇರುಳು, ಗಾಳಿ ಬಿಸಿಲು ಎಲ್ಲವೂ...

ಎಲ್ಲೊ ಯಾವುದರಲ್ಲೊ ಅವನು ಕಳೆದು ಹೋಗುತ್ತಿರಲಿಲ್ಲ! ಅವನಲ್ಲಿ ಅವನನ್ನು ನೋಡುತ್ತಾ, ಇನ್ನಷ್ಟು ಎಚ್ಚರವಾಗುತ್ತಿದ್ದ! ಇದ್ದಕ್ಕಿದ್ದ ಹಾಗೇ ಅವನ ಕುತ್ತಿಗೆಗೆ ನೇತು ಹಾಕಿದ್ದ ಫೋನ್ ಒಂದೇ ಸಮನೆ ಕೂಗ ತೊಡಗಿತು, ರಿಸೀವ್ ಮಾಡಿದೊಡನೆ, ''ಎಲ್ಲಿ ಹೋಗಿದ್ದೀರಾ, ನಿಮ್ ಫೋನಿಗೆ ಏನಾಗಿತ್ತು? ಎಷ್ಟ್ ಟ್ರೈ ಮಾಡೋದು?! ಎಲ್ಲೆಲ್ಲಿ ಹುಡುಕೋದು ನಿಮ್ಮನ್ನ, ಏನಾಗಿದೆ ನಿಮಗೆ!'' ಗಾಬರಿಯಿಂದ ಬರುತ್ತಿದ್ದ ಮಾತುಗಳನ್ನು ಕೇಳುತ್ತಿದ್ದಂತೆ ಅವನಿಗೆ ಏನು ಪ್ರತಿಕ್ರಿಯಿಸುವುದೆಂದು ತಿಳಿಯಲ್ಲಿಲ್ಲ. ''ಮಾತಾಡಿ ! ಮಾತಾಡಿ !'' ಇತ್ತ ಇವನು ''ಏನು ಮಾತಾಡಬೇಕು?'' ಎಂದೊಡನೆ ಸಿಟ್ಟಿಗೆದ್ದ ಆಕೆ, ''ಥೂ! ನಿಮ್ಮ ಜನುಮಕ್ಕಿಷ್ಟು ಬೆಂಕಿಹಾಕಿ! ಏನ್ ಮಾತಾಡ್ಬೇಕು ಅಂಥ ಕೇಳ್ತೀರಾ?!'' ಎಂದೂ ಫೋನ್ ಕಟ್ ಮಾಡುತ್ತಾಳೆ. ಇದನ್ನು ಕೇಳಿದ ಅವನು ಈಗ ಎಲ್ಲೋ ಕಳೆದು ಹೋದಂತಾದ. ''ನಿಮ್ ಮುಖಕ್ಕಿಷ್ಟು ಬೆಂಕಿಹಾಕ'' ಎನ್ನುವ ಹೆಸರಲ್ಲಿ ಆ ನಂಬರ್ ಸೇವ್ ಮಾಡಿಕೊಂಡು ಮುಂದೆ ಸಾಗಿದ.

ಒಂದಷ್ಟು ಸಮಯದ ಬಳಿಕ ಮತ್ತೊಂದು ನಂಬರ್‌ನಿಂದ ಕರೆ ಬಂದಿದ್ದನ್ನು ರಿಸೀವ್ ಮಾಡಿದ. ''ಎಲ್ಲೋಗಿದ್ದೀಯಾ? ನಿನ್ನ ನಂಬಿ ಶ್ಯುರಿಟಿ ಹಾಕಿದ್ನಲ್ಲಾ! ಈಗ ಎಲ್ಲಾ ನನ್ ತಲೆಗೆ ಬಂದಿದೆ! ಎಲ್ಲಿದ್ದಿಯ ಹೇಳು ಅಲ್ಲಿಗೇ ಬರ್ತೀನಿ. ಹೇಳೋ?!'' ಪ್ರತಿಯಾಗಿ ಇವನು ಇತ್ತಲಿಂದ ''ನೀವು ಯಾರು ಅಂತ ಗೊತ್ತಿಲ್ಲ, ಆದರೆ ನಿಮಗೆ ಆಸಕ್ತಿ ಇದ್ದರೆ ನೀವೂ ಸಹ ಈ ಬೆಟ್ಟವನ್ನು ಹತ್ತಬಹುದು. ಎಲ್ಲವೂ ಶುಭವಾಗುವುದು.''

''ಅಯ್ಯಾ ಡಬ್ಬಾ ನನ್ ಮಗ್ನೇ, ಅಲ್ಲೇ ಬರ್ತೀನಿ ಇರು.'' ಆ ಕಾಲ್ ಕಟ್ ಆದ ನಂತರ, ''ಶ್ಯೂರಿಟಿ, ಡಬ್ಬ ನನ್ ಮಗ'' ಎಂದು ಆ ನಂಬರ್ ಸೇವ್ ಮಾಡಿಕೊಂಡು ಮುಂದೆ ಸಾಗಿದ. ಹೀಗೆ ಸಾಗುತ್ತ ಸಾಗುತ್ತಾ ಅವನಿಗೆ ಎಷ್ಟೆಷ್ಟೋ ಕರೆಗಳು ಬರತೊಡಗಿದವು. ಹಿಂದಿನಂತೆಯೇ ಅವರ ಸಂಭಾಷಣೆಯ ಕೆಲವು ಮಾತುಗಳನ್ನು ಆ ನಂಬರ್‌ಗಳಲ್ಲಿ ಅನುಗುಣವಾಗಿ ಸೇವ್ ಮಾಡತೊಡಗಿದ! ಕಡೆಯಲ್ಲಿ,

''ಹೆತ್ತ್ ಹೊಟ್ಟೆಗೆ ಬೆಂಕಿ ಇಟ್ಟೆ.''

''ಈ ಕಡೇ ಬಂದ್ರೆ ಸಾಯಿಸ್ಬಿಡ್ತೀನಿ.''